## 6

# ಬಾಪ್ತಿಸ್ಮ ಮತ್ತು "ನೂತನ ಜೀವಿತ"

*"ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ರೋಮಾಪುರ 6:3, 4).*

ರೋಮಾಪುರ 6:1-7 ವಚನಗಳನ್ನು ಅರ್ಥಮಾಡಿಕೊಳ್ಳಲು, ಈ ವಚನಗಳಿಗೆ ನಡಿಸುವ ಪೌಲನ ಯೋಚನೆಗಳನ್ನು ನಾವು ಅರ್ಥಮಾಡಿಕೊಳ್ಳತಕ್ಕದ್ದು. 1ರಿಂದ 3ರ ವರೆಗಿನ ಅಧ್ಯಾಯಗಳಲ್ಲಿ, ಕ್ರಿಸ್ತನಿಲ್ಲದ ಅನ್ಯರ ಮತ್ತು ಯೆಹೂದ್ಯರ ಸ್ಥಿತಿಯನ್ನು ಪೌಲನು ಚರ್ಚಿಸುತ್ತಿದ್ದನು.

ಅನ್ಯರು ಎಲ್ಲಾ ತರದ ದುಷ್ಟತ್ವದಲ್ಲಿಯೂ ಪಾಪಭರಿತ ಜೀವಿತದಲ್ಲಿಯೂ ತುಂಬಿಕೊಂಡವರಾಗಿದ್ದರು, ಅದರಲ್ಲಿ ಹೆಚ್ಚಾದದ್ದು ಯೆಹೂದ್ಯರಿಗೆ ಅಸಹ್ಯವಾದದ್ದಾಗಿತ್ತು. ಅನ್ಯರು ವಿಗ್ರಹಾರಾಧಕರೂ, ಲೈಂಗಿಕವಾಗಿ ದುರಾಚಾರಿಗಳೂ ಮತ್ತು ನೀತಿವಂತರೂ ಆಗಿದ್ದರು (1:24-32).

ಯೆಹೂದ್ಯರೂ ಇವರಿಗಿಂತ ಹೆಚ್ಚು ಉತ್ತಮರಾಗಿರಲಿಲ್ಲ, ಯಾಕಂದರೆ ಅದೇ ಆಚಾರಗಳಲ್ಲಿ ಕೆಲವೊಂದರಲ್ಲಿ ಭಾಗಿಗಳಾಗಿದ್ದರು (2:1). ತಮ್ಮ ಆತ್ಮಿಕ ಕ್ಷೇಮಾಭಿವೃದ್ಧಿಗಾಗಿ, ಅವರು ಧರ್ಮಶಾಸ್ತ್ರದ ಮೇಲೆ ಅವಲಂಬಿಸಿದ್ದರು ಮತ್ತು ಸುನ್ನತಿ ಹೊಂದುತ್ತಿದ್ದರು (2:17, 25). ಕಪಟಿಗಳಾಗಿದ್ದರು, ಧರ್ಮಶಾಸ್ತ್ರದ ಮಟ್ಟಕ್ಕನುಗುಣವಾಗಿ ಅವರು ಜೀವಿಸಲಿಲ್ಲ ಇಲ್ಲವೇ ಸುನ್ನತಿಯನ್ನು ಅರ್ಥ ಮಾಡಿಕೊಳ್ಳಲಿಲ್ಲ, ಅನ್ಯರಂತೆಯೇ ಅವರು ಪಾಪಿಗಳಾಗಿದ್ದರು (3:9, 10, 23).

ಅವರ ಕಾರ್ಯಗಳು ಅವರನ್ನು ರಕ್ಷಿಸುವ ಬದಲು, ಅವರ ಕಾರ್ಯಗಳು ಅವರನ್ನು ದಂಡಿಸಿದವು (2:5-13). ಅನ್ಯರಾಗಲೀ ಇಲ್ಲವೇ ಯೆಹೂದ್ಯರಾಗಲೀ ತಮ್ಮ ಕಾರ್ಯಗಳಿಂದ ರಕ್ಷಿಸಲ್ಪಡುವದಿಲ್ಲ, ಯಾಕಂದರೆ ಅವರೆಲ್ಲರೂ ಪಾಪಿಗಳಂತೆ (3:9, 10, 23) ಅಪರಿಪೂರ್ಣ ಕೆಲಸಗಳೊಂದಿಗೆ ಕಂಡುಕೊಂಡರು. ದೃಷ್ಟ ಕೃತ್ಯಗಳಿಂದ ತುಂಬಲ್ಪಟ್ಟ ತಮ್ಮ ಕಾರ್ಯಗಳ ಮೇಲೆ ಅವಲಂಬಿಸುವ ಬದಲು (4:1-8), ಅವರು, ತಮ್ಮ ರಕ್ಷಣೆಗಾಗಿ ದೇವರ ಕೃಪೆಯನ್ನು ಸಾಧ್ಯವಾಗಿ ಮಾಡಿದ ಯೇಸುವಿನ ಕಾರ್ಯಗಳಲ್ಲಿ ಅವರು ವಿಶ್ವಾಸವನ್ನಿಡಬೇಕಾಗಿತ್ತು (5:1, 2).

ಧರ್ಮಶಾಸ್ತ್ರವು ಈ ಕೃಪೆಯನ್ನು ಒದಗಿಸಲಿಲ್ಲ; ಆದರೆ ಅದರ ಅಧೀನತೆಯಲ್ಲಿ ಇದ್ದವರನ್ನು ಅವರ ಪಾಪಗಳಲ್ಲಿ ಬಿಟ್ಟಿತು (3:20; 5:20, 21). ಅನ್ಯರ ಪರಿಸ್ಥಿತಿಯು ಹೆಚ್ಚು ಚೆನ್ನಾಗಿರಲಿಲ್ಲ, ಯಾಕಂದರೆ ಮಾನವ ಗಮನಿಸುವಿಕೆ ಮತ್ತು ಅನುಭವದ ಸ್ವಾಭಾವಿಕವಾದ ಪ್ರಗತಿಯ ಮುಖಾಂತರ ಹೊಂದಿಕೊಂಡಿದ್ದ ದೇವರ ಚಿತ್ತದ

ಜ್ಞಾನವನ್ನು ಉಲ್ಲಂಘಿಸಿದ್ದ ಸಂಗತಿಯ ಕಾರಣದಿಂದ ಅವರು ಪಾಪಿಗಳಾಗಿದ್ದರು (1:21; 2:14, 15). ಅನ್ಯರು ಮತ್ತು ಯೆಹೂದ್ಯರು ಇಬ್ಬರೂ ಅನೀತಿವಂತರಾಗಿದ್ದರು; ಅವರು ಜೀವಿಸಿದ್ದರ ಮಟ್ಟವನ್ನು ಎಲ್ಲರೂ ಉಲ್ಲಂಘಿಸಿದರು. ಕ್ಷಮಾಪಣೆಯನ್ನು ಸಾಧ್ಯಮಾಡುವಂತೆ ದೇವರು - ಯೇಸುವಿನ ಮುಖಾಂತರ - ಅವರ ಪಾಪಗಳನ್ನೂ ಅಪರಾಧಗಳನ್ನೂ ಮುಚ್ಚುವದಕ್ಕಾಗಿ ಕ್ಷಮಾಪಣೆಯನ್ನು ನೀತಿಯನ್ನು ತರಲು ಕೃಪೆಯನ್ನು ಮತ್ತು ನೀತಿ ನಿರ್ಣಯವನ್ನು ಒದಗಿಸಿದನು (5:20, 21).

## "ಕೃಪೆಯು ಹೆಚ್ಚಲಿ ಎಂದು ಪಾಪದಲ್ಲಿ ಇನ್ನೂ ಇರಬೇಕೋ?" (6:1)

ಕ್ಷಮಿಸಲ್ಪಟ್ಟ ಕೆಲವರ ಮನಸ್ಸಿನಲ್ಲಿ ಬಹುಶಃ ಒಂದು ಪ್ರಶ್ನೆ ಉದ್ಭವಿಸಿತು: "ಕೃಪೆಯು ಹೆಚ್ಚಲಿ ಎಂದು ಪಾಪದಲ್ಲಿ ಇನ್ನೂ ಇರಬೇಕೋ?" (ರೋಮಾಪುರ 6:1ಬಿ). ಇದನ್ನು ಒಬ್ಬ ಯುವ ವಧುವಿಗೆ ಆಕೆಯ ಚಿಕ್ಕಪ್ಪನು, ಆಕೆ ಮತ್ತು ಆಕೆಯ ಪತಿ ಯಾವುದೇ ಹಣಕಾಸಿನ ತೊಂದರೆ ಎದುರಿಸಿದರೆ, ಅವರನ್ನು ಹಣಕೊಟ್ಟು ಸಾಲದಿಂದ ಮುಕ್ತರನ್ನಾಗಿ ಮಾಡುವೆನೆಂದು ಹೇಳಿದ್ದಕ್ಕೆ ಹೋಲಿಸಬಹುದು. ಆಕೆ ತನ್ನ ಪತಿಯೊಂದಿಗೆ ಸಮಾಲೋಚನೆ ಮಾಡಿ, ಅವರಿಗೆ ಯಾವುದೇ ಹಣಕಾಸಿನ ಚಿಂತೆಯಿರಬಾರದು, ಆದರೆ ತಮಗೆ ಪಡೆದುಕೊಳ್ಳಲು ಸಾಧ್ಯವಾಗದಂಥ - ಅತೀ ಬೆಲೆಯುಳ್ಳ ಕಾರು, ಒಂದು ಹೊಸ ಮನೆ, ಮತ್ತು ಬೆಲೆಯುಳ್ಳ ಉಡುಪು ಹಾಗೂ ಆಭರಣಗಳನ್ನು ಕೊಂಡು, ಸ್ವಾಸ್ತ್ಯಮಾಡಿಕೊಳ್ಳೋಣ ಎಂದು ತೀರ್ಮಾನಿಸಿದರು. ಐಶ್ವರ್ಯವಂತ ಚಿಕ್ಕಪ್ಪನಿಂದ ತೀರಿಸಬೇಕಾದ ದೊಡ್ಡ ಮೊತ್ತದ ಸಾಲವನ್ನು ಮಾಡಿದರು. ಚಿಕ್ಕಪ್ಪನ ಉದ್ದೇಶವನ್ನೂ ಉದಾರತೆಯನ್ನೂ ದುರುಪಯೋಗ ಮಾಡಿಕೊಳ್ಳುತ್ತಿದ್ದೇವೆ ಎಂದು ಭಾವಿಸಿದರೂ ಹಾಗೆ ಮಾಡಿದರು.

ಅದೇ ರೀತಿಯಲ್ಲಿ, ಆತನ ಕೃಪೆಯು ನಮ್ಮ ಪಾಪಗಳನ್ನು ಮುಚ್ಚುವುದು ಎಂದು ದೇವರು ವಾಗ್ದಾನ ಮಾಡಿದ್ದಾನೆ, ಆದರೆ ಪಾಪಭರಿತ ಕಾರ್ಯಗಳಿಗೆ ಸಮರ್ಪಿಸಿಕೊಂಡ ಜೀವಿತ ನಡಿಸಲು ನಮ್ಮನ್ನು ಪ್ರೋತ್ಸಾಹಿಸುವದಕ್ಕಾಗಿ ಉದ್ದೇಶಿಸಿರುವದಿಲ್ಲ. ಇದು ಕೃಪೆಯ ಉದ್ದೇಶವಾಗಿರುವದಿಲ್ಲ. ಬಾಪ್ತಿಸ್ಮದಲ್ಲಿ ಯೋಗ್ಯವಾದ ಆತ್ಮಿಕ ಒಳಗೊಳ್ಳುವಿಕೆಯು ನೂತನ ಸ್ವಭಾವವನ್ನು ತರಬೇಕೆಂದು ಪೌಲನು ಬೋಧಿಸಿದನು. ಕ್ರಿಸ್ತನು ಯೇಸುವಿಗಾಗಿ ನೂತನ ಜೀವಿತಕ್ಕೆ ಸಮರ್ಪಿಸಿಕೊಳ್ಳಬೇಕು; ಕೃಪೆಯ ಮೇಲೆ ಅವಲಂಭಿಸುವದರಿಂದ ಅವನು ಪಾಪ ಮಾಡುವದನ್ನು ಮುಂದುವರಿಸುವದಿಲ್ಲ.

## "ಆತನ ಮರಣದಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡೆವು" (6:3, 4)

### ಬಾಪ್ತಿಸ್ಮ ಮತ್ತು ನೂತನ ಜೀವಿತ

ಕೃಪೆಯನ್ನು ದುರುಪಯೋಗ ಪಡಿಸಿಕೊಳ್ಳುವಂಥ ತನ್ನ ವಿಷಯವನ್ನು ಕಟ್ಟಲು ಪೌಲನು ಬಾಪ್ತಿಸ್ಮವನ್ನು ಆಯ್ದುಕೊಂಡದ್ದು ವಿಚಿತ್ರವಾಗಿದೆ ಎಂದು ಕೆಲವರು ಯೋಚಿಸಬಹುದು (ರೋಮಾಪುರ 6:1-7). ಬಾಪ್ತಿಸ್ಮವು ಆತ್ಮಿಕ ಸಂಬಂಧಗಳಿಲ್ಲದೇ ಕೇವಲ ಒಂದು ಧರ್ಮಾಚರಣೆಯಾಗಿದ್ದರೆ, ಆಗ ಪಾಪಭರಿತ ಜೀವನದ ಕೊನೆಗಾಣುವಿಕೆಗಾಗಿ ಬಾಪ್ತಿಸ್ಮದಿಂದ ಯಾವುದೇ ವಾದ ಮಾಡಲಿಕ್ಕಾಗುವದಿಲ್ಲ. ಹಾಗಿದ್ದರೂ, ಬಾಪ್ತಿಸ್ಮವು, ದೇವರಿಗೆ ವಿಧೇಯತೆಯ ದೈಹಿಕ ಕಾರ್ಯಕ್ಕಿಂತ ಹೆಚ್ಚಾಗಿ ಆತ್ಮಿಕವಾದ, ಜೀವನ

ಬದಲಾಯಿಸುವ ಅನುಭವವನ್ನು ಒಳಗೊಂಡಿದ್ದರೆ, ಆಗ ನೂತನ ಜೀವಿತವು ಬಾಪ್ತಿಸ್ಮವನ್ನು ಅನುಸರಿಸಬೇಕು ಎಂಬ ಪೌಲನ ವಾದವು ಬೆಲೆಯುಳ್ಳದ್ದಾಗುತ್ತದೆ - ಅದು ಹಾಗೆಯೇ ಇರುತ್ತದೆ.

ಯೇಸುವಿನ ಮರಣದಲ್ಲಿ ಬಾಪ್ತಿಸ್ಮ ಮಾಡಿಸಿಕೊಳ್ಳುವದರಿಂದ ಬಾಪ್ತಿಸ್ಮದಲ್ಲಿ ಆತನೊಂದಿಗೆ ನಾವು ಸಂಬಂಧಿಸಲ್ಪಡುತ್ತೇವೆ (ರೋಮಾಪುರ 6:3). ಶಿಲುಬೆಯ ಮೇಲಿನ ಯೇಸುವಿನ ಮರಣದ ಮೂಲಕ, ಆತನು ತನ್ನ ದೈಹಿಕ ಜೀವವನ್ನು ತೆಗೆದು ಹಾಕಿದನು - ಆದರೆ ಪುನಃ ದೈಹಿಕ ಜೀವನದಲ್ಲಿ ಪ್ರವೇಶಿಸುವದಕ್ಕಾಗಿಯೇ. ಆತ್ಮಿಕ ಅರ್ಥದಲ್ಲಿ ಬಾಪ್ತಿಸ್ಮವು ನಮ್ಮ ಹಿಂದಿನ ಪಾಪಭರಿತ ಜೀವನವು ಅಂತ್ಯಗೊಂಡು ಒಂದು ನೂತನ ಜೀವನವು ಪ್ರಾರಂಭವಾಗುವಂಥ ಸಮಯ ಮತ್ತು ಕೃತ್ಯವಾಗತಕ್ಕದ್ದು. ಪಾಪಭರಿತ ವ್ಯಕ್ತಿಯಾಗಿ ದೈಹಿಕವಾಗಿ ನೀರಿನೊಳಗೆ ಪ್ರವೇಶಿಸಿ, ಅದೇ ಪಾಪಭರಿತ ವ್ಯಕ್ತಿಯಾಗಿ ಹಿಂದಿರುಗಿ ಬರುವದರ ಬದಲು, ನಾವು ಪಾಪಭರಿತ ಹಳೇ ಜೀವಿತವನ್ನು ಮರಣಕ್ಕೊಪ್ಪಿಸಿ ನೂತನ ಆತ್ಮಿಕ ಜೀವಿತದೊಳಗೆ ಪ್ರವೇಶಿಸಬೇಕು, ಯಾಕಂದರೆ ನಾವು ಯೇಸುವಿನೊಂದಿಗೆ ಆತನ ಮರಣದಲ್ಲಿ ಮತ್ತು ಪುನರುತ್ಥಾನದಲ್ಲಿ ಸಂಬಂಧಿಸಿದ್ದೇವೆ ಎಂಬುದು ಅವನ ಅನ್ವಯವಾಗಿರುತ್ತದೆ.

ಪೌಲನು ಬಾಪ್ತಿಸ್ಮವನ್ನು ಒಂದು ಸಾಂಕೇತಿಕ ಕೃತ್ಯಕ್ಕಿಂತ ಹೆಚ್ಚಿನದಾಗಿ ದೃಷ್ಟಿಸುತ್ತಾನೆ. ಡಗ್ಲಾಸ್ ಮೂ ಹೀಗೆ ಬರೆದನು,

> … ರೋಮಾಪುರ 6ರಲ್ಲಿ, ಇಲ್ಲವೇ [ಹೊಸ ಒಡಂಬಡಿಕೆಯ] ಬೇರೆ ಕಡೆಯಲ್ಲಿ ನಿಜವಾದ ದೈಹಿಕ ಚಲನೆಗಳಿಗೆ - ಬಾಪ್ತಿಸ್ಮದಲ್ಲಿ ಒಳಗೊಂಡಿರುವ ಮುಳುಗೇಳಿ ಸುವಿಕೆ ಮತ್ತು ಮುಳುಗಿಸುವಿಕೆಗಳು [ಅಂದರೆ ನೀರಿನೊಳಗೆ ಹೋಗುವುದು ಮತ್ತು ನೀರಿನ ಹೋರಗೆ ಬರುವುದು] - ಸಾಂಕೇತಿಕವಾಗಿ ಮಹತ್ವವು ಕೊಡಲ್ಪಟ್ಟಿರುವದರ ಪುರಾವೆಯಿರುವದಿಲ್ಲ. ರೋಮಾಪುರ 6ರಲ್ಲಿಯ ಕೇಂದ್ರೀಕ ರಿಸುವಿಕೆಯು, ನಿಶ್ಚಯವಾಗಿ, ಬಾಪ್ತಿಸ್ಮದ *ವಿಧಿಯ* ಮೇಲೆ ಇರುವದಿಲ್ಲ, ಆದರೆ ಬಾಪ್ತಿಸ್ಮದ *ಸರಳ ಘಟನೆಯ* ಮೇಲಿದೆ.[1]

ಆ್ಯಂಡರ್ಸ್ ನೈಗ್ರಿನ ಒಪ್ಪಿಕೊಂಡನು:

> ಬಾಪ್ತಿಸ್ಮ ಹೊಂದಿದವನು ನೀರಿನಲ್ಲಿ ಮುಳುಗೇಳಿಸಲ್ಪಟ್ಟಾಗ, ಕಾರ್ಯವು "ಕ್ರಿಸ್ತನೊಂದಿಗೆ" ಹೂಣಲ್ಪಡುವದನ್ನು ಸಾಂಕೇತಿಸುತ್ತದೆ; ಮತ್ತು ಅವನು ಪುನಃ ನೀರಿನಿಂದ ಮೇಲಕ್ಕೆ ಹೊರಗೆ ಬರುವಾಗ, ಅದು "ಕ್ರಿಸ್ತನೊಂದಿಗೆ" ಪುನರುತ್ಥಾನವನ್ನು ಸಾಂಕೇತಿಸುತ್ತದೆ, ಆದರೆ, ಆ ಕಾರಣಕ್ಕಾಗಿ, ಬಾಪ್ತಿಸ್ಮದ ಬಗ್ಗೆ ಪೌಲನ ದೃಷ್ಟಿಕೋನವನ್ನು "ಸಾಂಕೇತಿಕವಾದದ್ದು" ಎಂಬಂತೆ, ಆ ಪದವು ಸಾಮಾನ್ಯವಾಗಿ ಉಪಯೋಗಿಸಿದ ಅರ್ಥದಲ್ಲಿ ತಿಳಿದುಕೊಂಡರೆ ಅದು ಕೇವಲ ತಪ್ಪು ವ್ಯಾಖ್ಯಾನವಾಗುವುದು. ಯಾಕಂದರೆ, ಪೌಲನ ಪ್ರಕಾರ, ಬಾಪ್ತಿಸ್ಮದಲ್ಲಿ ನಾವು ವಾಸ್ತವಿಕತೆಗಳೊಂದಿಗಿರುತ್ತೇವೆ, ಆದರೆ ಕೇವಲ ಸಾಂಕೇತಿಕ ಪ್ರಾತಿನಿಧ್ಯಗಳೊಂದಿಗೆ ಅಲ್ಲ. ಬಾಪ್ತಿಸ್ಮವು ಸಾಂಕೇತಿಸುವದನ್ನು ನಿಜವಾಗಿಯೂ ಮತ್ತು ಬಾಪ್ತಿಸ್ಮದ ಮುಖಾಂತರ ಸ್ಪಷ್ಟವಾಗಿ *ಸಂಭವಿಸುವುದು.*[2]

ಹಾಗಾದರೆ, ಬಾಪ್ತಿಸ್ಮವು ನಮ್ಮನ್ನು ಯೇಸುವಿನೊಳಗೆ ಹಾಗೂ ಆತನ ಮರಣದೊಂದಿಗೆ ಸಂಬಂಧಿಸಿದ ಮರಣದಲ್ಲಿ ತರುತ್ತದೆ.

**ನೂತನ ಜೀವನದ ಬಗ್ಗೆ ಮೂರು ಪ್ರಶ್ನೆಗಳು**

ರೋಮಾಪುರ 6:1-3ರಲ್ಲಿ ಮೂರು ಪ್ರಗತಿಪರ ಪ್ರಶ್ನೆಗಳು ಪೌಲನಿಂದ ಕೇಳಲ್ಪಟ್ಟವು. (1) "ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ?" (ವಚನ 1ಬಿ); (2) "ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವುದು ಹೇಗೆ?" (ವಚನ 2ಬಿ); ಮತ್ತು (3) "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?" (ವಚನ 3).

ಪೌಲನು ಮೊದಲನೆಯ ಪ್ರಶ್ನೆಗೆ ಈ ರೀತಿಯಲ್ಲಿ ಉತ್ತರ ಕೊಟ್ಟನು: "ಎಂದಿಗೂ ಇರಬಾರದು!" ಈ ಮಾತಿನ ಉಪಯೋಗವು ಕ್ರೈಸ್ತರು ತಮ್ಮ ಪಾಪಗಳನ್ನು ಮುಚ್ಚುವದಕ್ಕೆ ಕೃಪೆಯನ್ನು ನಿರೀಕ್ಷಿಸುತ್ತ ನಿಶ್ಚಯವಾಗಿ ಪಾಪದಲ್ಲಿ ಮುಂದುವರಿಯಬಾರದೆಂಬುದನ್ನು ಅನ್ವಯಿಸುತ್ತದೆ. ಪೌಲನ ಪ್ರಶ್ನೆಯು ಅಲಂಕಾರಿಕವಾದದ್ದಾಗಿತ್ತು; ಅವರಿಗೆ ಉತ್ತರವು ತಿಳಿದಿರುವದಿಲ್ಲ ಮತ್ತು ಅದಕ್ಕಾಗಿ ಅವನು ಅವರಿಗೆ ತಿಳುವಳಿಕೆ ಕೊಡುವನು ಎಂದು ಸೂಚಿಸುವುದಿಲ್ಲ. ಬಾಪ್ತಿಸ್ಮದಲ್ಲಿಯ ಅವರ ಅನುಭವದ ಕಾರಣದಿಂದ, ಅವನು ಹೇಳುತ್ತಿರುವದನ್ನು ಅವರು ಆಗಲೇ ಅರ್ಥಮಾಡಿಕೊಳ್ಳತಕ್ಕದ್ದೆಂದು ಒತ್ತಿ ಹೇಳುತ್ತಿದ್ದಾನೆ.

ಅದೇ ರೀತಿಯಲ್ಲಿ ಪೌಲನ ಎರಡನೆಯ ಪ್ರಶ್ನೆಯು ತನ್ನ ಸ್ವಂತ ಉತ್ತರವನ್ನು ಸೂಚಿಸುತ್ತದೆ. ನಾವು ಪಾಪಕ್ಕೆ ಸತ್ತು ಹೋಗಿದ್ದರೆ, ನಾವು ಅದರಲ್ಲಿ ಇನ್ನು ಮುಂದೆ ಜೀವಿಸಬಾರದು.

ಮೂರನೆಯ ಪ್ರಶ್ನೆಗೆ ಉತ್ತರವಾಗಿ, ಯೇಸುವಿನಲ್ಲಿ ಬಾಪ್ತಿಸ್ಮ ಹೊಂದುವದರಿಂದ - ಆತನ ಮರಣದಲ್ಲಿ ನಾವು ಪ್ರವೇಶಿಸಿದಾಗ - ಪಾಪಕ್ಕೆ ನಮ್ಮ ಮರಣವಾಯಿತು ಎಂದು ಪೌಲನು ಉತ್ತರಿಸಿದನು. ಆ ಮರಣದಿಂದ ನಾವು ಎಬ್ಬಿಸಲ್ಪಟ್ಟದ್ದರಿಂದ, ಪಾಪಭರಿತ ಆಚಾರಗಳಿಂದ ಸ್ವತಂತ್ರರಾಗಿ ನೂತನ ಜೀವಿತದಲ್ಲಿ ನಾವು ನಡೆಯತಕ್ಕದ್ದು.

"Died" (ವಚನಗಳು 2, 7, 8), "dead" (ವಚನಗಳು 11, 13) ಮತ್ತು "death" (ವಚನ 4), ಎಂಬುದರಿಂದ ಪೌಲನ ಅರ್ಥವು ಪರಿಣಾಮವು ನಮ್ಮ ಪಾಪಭರಿತ ಹಿಂದಿನ ಸಂಗತಿಯು ಇಲ್ಲವಾಗಿ ಹೋಗುವುದೆಂದಾಗುತ್ತದೆ. "Dead to," "died to," ಮತ್ತು "die to," ಎಂಬುದರಿಂದ, ಮೊದಲು ನಿಮ್ಮನ್ನು ನಿಯಂತ್ರಿಸಿದ ಪಾಪದ ಶಕ್ತಿಯು (ರೋಮಾಪುರ 7:4; ಗಲಾತ್ಯ 2:19; ಕೊಲೊಸ್ಸೆ 2:20; 3:3-5; 1 ಪೇತ್ರ 2:24) ಹೊರಟುಹೋಗಬೇಕು ಎಂಬ ತತ್ವವನ್ನು ಅವನು ವ್ಯಕ್ತಪಡಿಸುತ್ತಿರುವನು. ನಾವು "ಪಾಪಕ್ಕೆ ಸತ್ತು ಹೋದೆವು," ಎಂದು ಪೌಲನು ವಚನ 2ರಲ್ಲಿ ಬರೆದನು. "ಯಾವಾಗ ಮತ್ತು ಹೇಗೆ ಅದು ಸಂಭವಿಸಿತು? ಅಪೊಸ್ತಲನ ಪ್ರಕಾರವಾಗಿ ಅದು ಬಾಪ್ತಿಸ್ಮದಲ್ಲಿ ಮತ್ತು ಬಾಪ್ತಿಸ್ಮದ ಮುಖಾಂತರ ಸಂಭವಿಸಿತು."[3]

ಪಾಪಕ್ಕೆ ನಾವು ಮರಣದಲ್ಲಿ ಪ್ರವೇಶಿಸುವದರ ಉದ್ದೇಶವು ಪಾಪದ ಜೀವಿತವನ್ನು ಅಂತ್ಯಗೊಳಿಸುವುದು ಹಾಗೂ ಒಂದು *ನೂತನ ಜೀವಿತವನ್ನು*, ನೀತಿಯ ಜೀವಿತವನ್ನು ಪ್ರಾರಂಭಿಸುವುದಾಗಿದೆ (ರೋಮಾಪುರ 6:4). ನಾವು ಬಾಪ್ತಿಸ್ಮ ಹೊಂದಿದಾಗ, ಆತ್ಮಿಕ ಅರ್ಥದಲ್ಲಿ ಯೇಸುವಿನ ಮರಣ ಮತ್ತು ಪುನರುತ್ಥಾನದ ಹೋಲಿಕೆಯಲ್ಲಿ ಭಾಗಿಗಳಾಗುತ್ತೇವೆ. ಯೇಸುವನ್ನು ಪುನರುತ್ಥಾನದ ಮುಖಾಂತರ ದೈಹಿಕ ನವೀಕರಣದಲ್ಲಿ ಪ್ರವೇಶಿಸಿದಂತೆ, ಬಾಪ್ತಿಸ್ಮದ ಮುಖಾಂತರ ಆತ್ಮಿಕ ನವೀಕರಣದಲ್ಲಿ ನಾವು ಪ್ರವೇಶಿಸತಕ್ಕದ್ದು (ರೋಮಾಪುರ 6:5).

ಈ ಬದಲಾವಣೆಯಾಗುತ್ತದೆ ಯಾಕಂದರೆ ಬಾಪ್ತಿಸ್ಮದಲ್ಲಿ, "ಪಾಪಧೀನ

ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ, ನಮ್ಮ ಪೂರ್ವ ಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ" (ರೋಮಾಪುರ 6:6). ಪೂರ್ವ ಸ್ವಭಾವದ ಒಂದು ಭಾಗ ಮಾತ್ರವೇ ಹೋಗಬೇಕೆಂದು ಪೌಲನು ಸೂಚಿಸುತ್ತಿರುವದಿಲ್ಲ, ಆದರೆ ಹಳೇ ಸ್ವಭಾವದ ಎಲ್ಲವೂ ಯೇಸುವಿನೊಂದಿಗೆ ಶಿಲುಬೆಗೆ ಹಾಕಲ್ಪಡಬೇಕೆಂದು ಸೂಚಿಸುತ್ತಿರುವನು. ಪರಿಣಾಮವು ನಾವು "ಪಾಪದಿಂದ ಬಿಡುಗಡೆ ಹೊಂದಿದ್ದೇವೆ" (ರೋಮಾಪುರ 6:7). ಪಾಪಕ್ಕೆ ಸತ್ತವರಾಗುವದರಿಂದ, ನಾವು ಪಾಪಕ್ಕೆ ದಾಸರಾಗಿರುವದರಿಂದ ಪಾಪದ ದೊರೆತನದಿಂದ ಮತ್ತು ಪಾಪದ ಆಚರಣೆಯಿಂದ ನಾವು ಸ್ವತಂತ್ರರಾಗಿ ಮಾಡಲ್ಪಟ್ಟಿದ್ದೇವೆ. ಬಾಪ್ತಿಸ್ಮದಲ್ಲಿ ಆತನೊಂದಿಗೆ ಹೂಣಲ್ಪಟ್ಟಾಗ ಮತ್ತು ಎಬ್ಬಿಸಲ್ಪಟ್ಟಾಗ ಯೇಸುವಿನೊಂದಿಗೆ ನಮ್ಮ ಆತ್ಮಿಕ ಒಳಗೊಳ್ಳುವಿಕೆಯ ಕಾರಣದಿಂದ ಇದೆಲ್ಲವೂ ಸಂಭವಿಸುತ್ತದೆ.

ಪಾಪಕ್ಕೆ ಸಾಯುವುದು ಮತ್ತು ನೀತಿಗಾಗಿ ಜೀವಿಸುವುದು ಕೇವಲ ಬಾಪ್ತಿಸ್ಮದ ಕಾರ್ಯದಿಂದ ಸಂಭವಿಸುವದಿಲ್ಲ, ಆದರೆ ಕಾರ್ಯದೊಂದಿಗೆ ಹೃದಯದ ಪ್ರತಿಕ್ರಿಯೆಯು ಸಂಬಂಧಿಸಿರುವದರಿಂದ ಆಗುತ್ತದೆ. "ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃ ಪೂರ್ವಕವಾಗಿ ಅಧೀನರಾದದರಿಂದಲೂ, ಪಾಪದಿಂದ ಬಿಡುಗಡೆಯನ್ನು ಹೊಂದಿ, ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರ ವಾಗಲೀ" (ರೋಮಾಪುರ 6:17, 18).

## "ಪಾಪಕ್ಕೆ ಇನ್ನು ಮುಂದೆ ದಾಸರಲ್ಲ" (6:6, 7)

ಕ್ಷಮಿಸಲ್ಪಡುವುದು ಬಾಪ್ತಿಸ್ಮದೊಂದಿಗೆ ಸಂಬಂಧಿಸಿದ ಆಶೀರ್ವಾದಗಳಲ್ಲಿ ಒಂದಾಗಿದ್ದರೂ, ಕ್ಷಮಿಸಲ್ಪಡುವ ಅರ್ಥದಲ್ಲಿ ಪೌಲನು ಪಾಪದಿಂದ ಬಿಡುಗಡೆ ಹೊಂದುವದರ ಬಗ್ಗೆ ಮಾತಾಡುತ್ತಿರುವದಿಲ್ಲ (ಅಪೊಸ್ತಲರ ಕೃತ್ಯಗಳು 2:38; 22:16). ರೋಮಾಪುರ 6:1-4ರಲ್ಲಿ ಅವನ ಉದ್ದೇಶವು, ಪಾಪದ ಪ್ರಭುತ್ವದಿಂದ ಮತ್ತು ದಾಸತ್ವದಿಂದ ನಾವು ಬಿಡುಗಡೆ ಹೊಂದಿದ ಕಾರಣದಿಂದ, ನಮ್ಮನ್ನು ಕ್ಷಮಿಸಲು ದೇವರ ಕೃಪೆಯ ಮೇಲೆ ಭರವಸೆಗೊಂಡು ಪಾಪಭರಿತ ಕಾರ್ಯಗಳನ್ನು ಮುಂದುವರಿಸಬಾರದೆಂದು ತೋರಿಸುವದಾಗಿತ್ತು. ಕ್ರೈಸ್ತರಿಗೆ ಪಾಪದಲ್ಲಿ ಜೀವಿಸುವುದು ಅಸಾಧ್ಯವಾದದ್ದಲ್ಲ ಎಂದು ಅವನು ಹೇಳಲಿಲ್ಲ; ಅದರ ಬದಲು ಪಾಪಮಾಡುವುದು ನಮ್ಮ ನೂತನ ಜೀವಕ್ಕೆ ಮತ್ತು ಪಾಪದಿಂದ ನಮ್ಮ ಹೊಸ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದೆ ಎಂದು ಹೇಳಿದನು. ಬಾಪ್ತಿಸ್ಮ ಹೊಂದುವದರಿಂದ ಯೇಸುವಿನೊಂದಿಗೆ ಪಾಪಕ್ಕೆ ಮರಣದಲ್ಲಿ ಮತ್ತು ನೂತನ ಜೀವಿತದಲ್ಲಿ ನಾವು ಪ್ರವೇಶಿಸಿದ್ದರಿಂದ ನಾವು ನೂತನ ಜೀವನ ಜೀವಿಸಬೇಕು. ಹಳೆ ಸ್ವಭಾವವು ಶಿಲುಬೆಗೆ ಹಾಕಲ್ಪಡಬೇಕು; ಪಾಪದ ದೇಹವು ತೆಗೆದು ಹಾಕಲ್ಪಡಬೇಕು. ಮತ್ತು ಇನ್ನು ಮುಂದೆ ಪಾಪಕ್ಕೆ ಸೇವೆ ಮಾಡಬಾರದು (ರೋಮಾಪುರ 6:6).

ಈ ಕಾರಣದಿಂದ ನಮ್ಮನ್ನು ನಾವು "ಪಾಪಕ್ಕೆ ಸತ್ತವರೂ, ಆದರೆ ಕ್ರಿಸ್ತ ಯೇಸುವಿನಲ್ಲಿ ದೇವರಿಗೆ ಜೀವಿಸುವವರೂ ಆಗಿದ್ದೇವೆ" (ರೋಮಾಪುರ 6:11) ಎಂದು ಯೋಚಿಸತಕ್ಕದ್ದು. ನಾವು ಪಾಪಕ್ಕೆ ವಿಧೇಯರಾಗಿ ಅದರ ದಾಸರಾಗುವಂತೆ ನಮ್ಮ ದೇಹಗಳ ಮೇಲೆ ಪಾಪವು ಯಜಮಾನನಾಗುವಂತೆ ಬಿಡಬಾರದು (ರೋಮಾಪುರ 6:12).

ನಾವು ಪಾಪದಲ್ಲಿ ಜೀವಿಸಿದರೆ, ನಾವು ಪಾಪಕ್ಕೆ ದಾಸರಾಗುವೆವು (ರೋಮಾಪುರ

6:16). ನಾವು ನೀತಿಗೆ ದಾಸರಾಗಿರಬೇಕು, ಯಾಕಂದರೆ ನಾವು ಪಾಪದ ಗುಲಾಮತನದಿಂದಲೂ ಯಜಮಾನತ್ವದಿಂದಲೂ ಬಿಡುಗಡೆ ಮಾಡಲ್ಪಟ್ಟಿದ್ದೇವೆ (ರೋಮಾಪುರ 6:13, 16, 19, 22). ನಾವು ಕೃಪೆಯ ಕ್ಷಮಿಸಲ್ಪಡುವ ಲಾಭಗಳ ಅಧೀನತೆಯಲ್ಲಿ ಇರುವ ಮತ್ತು ಧರ್ಮಶಾಸ್ತ್ರದ ಅಧೀನತೆಯಲ್ಲಿ ಇರದೇ ಇರುವ ಸಂಗತಿಯು (ರೋಮಾಪುರ 6:15) ನಮ್ಮನ್ನು ಪಾಪ*ದಿಂದ* ಸ್ವತಂತ್ರರನ್ನಾಗಿ ಮಾಡುತ್ತದೆ, ಆದರೆ ಪಾಪ ಮಾಡುವದಕ್ಕೆ ಸ್ವತಂತ್ರರನ್ನಾಗಿ ಮಾಡುವದಿಲ್ಲ. ಪಾಪವು ದಾಸರನ್ನಾಗಿ ಮಾಡಿಕೊಳ್ಳುತ್ತದೆ; ಅದು ಸ್ವಾತಂತ್ರ್ಯವನ್ನು ಕೊಡುವದಿಲ್ಲ (ಯೋಹಾನ 8:34). ಈ ಕಾರಣದಿಂದ, ನಾವು ಇನ್ನು ಮೇಲೆ ಪಾಪ ಮಾಡಬಾರದು, ಆದರೆ ಪಾಪಕ್ಕೆ ಸತ್ತವರೂ ನೀತಿಗೆ ಜೀವಿಸುವವರೂ ಆಗಿರಬೇಕು. ನಾವು ಬಾಪ್ತಿಸ್ಮ ಹೊಂದಿದಾಗ ಹೃದಯದಿಂದ ನಮ್ಮ ವಿಧೇಯತೆಯ ಕಾರಣದಿಂದ ನಾವು ಪಾಪದಿಂದ ಸ್ವತಂತ್ರರಾಗಿದ್ದೇವೆ (ರೋಮಾಪುರ 6:4-6, 17, 18).

## ಸಾರಾಂಶ

ಈ ವಾಕ್ಯಭಾಗದಲ್ಲಿ ಪೌಲನು ಬಾಪ್ತಿಸ್ಮವನ್ನು ಕೇಂದ್ರ ಬಿಂದುವನ್ನಾಗಿ ಮಾಡಿದನು. ಅದರಲ್ಲಿ ನಮ್ಮ ಪುರಾತನ ಜೀವಿತವು ಅಂತ್ಯಗೊಳ್ಳುತ್ತದೆ ಮತ್ತು ನೂತನ ಜೀವಿತ ಪಾರ್ರಂಭವಾಗುತ್ತದೆ. ಯೇಸುವಿನೊಂದಿಗೆ ಹೂಣಿಡುವಿಕೆ ಮತ್ತು ಪುನರುತ್ಥಾನದೊಂದಿಗೆ ಹೃದಯ ಸಂಬಂಧದ ಕಾರಣ ಇದು ಸಂಭವಿಸುತ್ತದೆ. ಬಾಪ್ತಿಸ್ಮದ ಕೃತ್ಯವು ತನ್ನಲ್ಲಿ ಮತ್ತು ತನ್ನೊಂದಿಗೆ ಬದಲಾವಣೆಯನ್ನು ತರುವ ಅಗತ್ಯತೆಯಿರುವದಿಲ್ಲ. ಹೀಗಿದ್ದರೂ, ಬಾಪ್ತಿಸ್ಮದಲ್ಲಿ ಯೇಸುವಿನ ಹೂಣಿಡುವಿಕೆ ಮತ್ತು ಪುನರುತ್ಥಾನದೊಂದಿಗೆ ಆತ್ಮಿಕವಾಗಿ ಸಂಬಂಧಿಸಲ್ಪಡುವಾಗ, ಈ ಬದಲಾವಣೆಯಾಗುವದನ್ನು ಅರ್ಥಮಾಡಿಕೊಂಡು, ಹಳೇ ಜೀವಿತವು ಅಂತ್ಯವಾಗುವುದು ಮತ್ತು ನೂತನ ಜೀವಿತವು ಪ್ರಾರಂಭವಾಗುವುದು.

---

ಟಿಪ್ಪಣಿಗಳು

[1]Douglas J. Moo, *The Epistle to the Romans,* The New International Commentary of the New Testament, gen. eds. Ned B. Stonehouse, F. F. Bruce, and Gordon D. Fee (Grand Rapids, Mich.: Wm. B. Eerdmans Publishing Co., 1996), 362. (Emphasis his.) [2]Anders Nygren, *Commentary on Romans*, trans. Carl C. Rasmussen (Philadelphia: Muhlenberg Press, 1949), 233. (Emphasis his.) [3]Ibid., 234.

## ಹೂಣಲ್ಪಡುವುದು ಮತ್ತು ಎಬ್ಬಿಸಲ್ಪಡುವುದು (6:4)

ಬಾಪ್ತಿಸ್ಮದಲ್ಲಿ ಯೇಸುವಿನೊಂದಿಗೆ ಹೂಣಿಡಲ್ಪಡುವುದು ಮತ್ತು ಎಬ್ಬಿಸಲ್ಪಡುವುದು ಎಂಬುದರ ಅನ್ವಯಗಳೇನು? ಬಾಪ್ತಿಸ್ಮದ ಕೃತ್ಯವು ನಾವು ನೀರಿನೊಳಗೆ ಇಳಿಸಲ್ಪಟ್ಟಾಗ ಮತ್ತು ನೀರಿನಿಂದ ಹೊರಗೆ ಎಬ್ಬಿಸಲ್ಪಟ್ಟಾಗ ಸಾಧಿಸಲ್ಪಡುತ್ತದೆ. ಹೆಚ್ಚಾದ ಬರಹಗಾರರು ಎವರೆಟ್ಟ್ ಎಫ್. ಹ್ಯಾರಿಸನ್ ಅವರ ವ್ಯಾಖ್ಯಾನದೊಂದಿಗೆ ಒಪ್ಪಿಕೊಳ್ಳುತ್ತಾರೆ: "ಸಹಜವಾಗಿ, [ರೋಮಾಪುರ 6ರಲ್ಲಿ ಪೌಲನು] ಕ್ರಿಸ್ತನೊಂದಿಗೆ ಹೂಣಿಡುವಿಕೆಯನ್ನು ಚಿತ್ರಿಸುತ್ತಾನೆ, ಹಾಗಿದ್ದರೂ ಕ್ಷಣಿಕವಾಗಿ, ಅದು ಬಾಪ್ತಿಸ್ಮದ ನೀರಿನ ಕೆಳಗೆ ದೇಹದ ಮುಳುಗಿಸುವಿಕೆಯಾಗಿರುತ್ತದೆ."[1]

---

ಟಿಪ್ಪಣಿ

[1]Everett F. Harrison, *The Expositor's Bible Commentary*, vol. 10, *Romans-Galatians*, gen. ed. Frank E. Gaebelein (Grand Rapids, Mich.: Zondervan Publishing House, 1976), 69.

© 2009 Truth for Today